722 (538) ಶ್ರೀ ಸುರೇಶ್ ಎಸ್ ಮಾರಿಹಾಳ (ಕಿತ್ತೂರು) – ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರ ಮತಕ್ಷೇತ್ರದಲ್ಲಿ ಇರುವ ಒಟ್ಟು ನ್ಯಾಯ ಬೆಲೆ ಅಂಗಡಿಗಳೆಷ್ಟು ,

ಆ) ಇದರಲ್ಲಿ ನ್ಯಾಯ ಬೆಲೆಯಲ್ಲಿ ವಿತರಿಸಲಾಗುವ ವಿವಿಧ ಬಗೆಯ ಪಡಿತರವೆಷ್ಟು ,

ಇ) ಕಿತ್ತೂರ ಕ್ಷೇತ್ರಕ್ಕೆ ಹೊಸದಾಗಿ ಎಷ್ಟು ನ್ಯಾಯ ಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಉದ್ದೇಶಿಸಲಾಗಿದೆ ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಕಿತ್ತೂರು ಮತಕ್ಷೇತ್ರದಲ್ಲಿ 76 ನ್ಯಾಯಬೆಲೆ ಅಂಗಡಿಗಳು ಇರುತ್ತವೆ

ಆ) ಕಿತ್ತೂರು ಮತ ಕ್ಷೇತ್ರದ ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಿಸುವ ಪಡಿತರ ವಿವರಗಳು ಕೆಳಕಂಡಂತ್ತಿರುತ್ತದೆ

(ಕ್ವಿಂ ಗಳಲ್ಲಿ)

ಪಡಿತರ ಚೀಟಿಗಳ ವಿಧ	ಅಕ್ಕಿ (ಕ್ವಿಂ ಗಳಲ್ಲಿ)	ಗೋಧಿ (ಕ್ವಿಂ ಗಳಲ್ಲಿ)	ಸಕ್ಕರೆ (ಕ್ವಿಂ ಗಳಲ್ಲಿ)	ಸೀಮೆ ಎಣ್ಣೆ (ಲೀಟರ್ ಗಳಲ್ಲಿ)
ಅಂತ್ಯೋದಯ	1522 08	380 52	54 36	21744
ಬಿಪಿಎಲ್	5153 20	1288 30	257 66	103064
ಎಪಿಎಲ್	–	–	–	6800
ಒಟ್ಟು	6675 28	1668 82	312 02	131608

ಇ) ಕಿತ್ತೂರು ಮತಕ್ಷೇತ್ರದಲ್ಲಿ ಪಡಿತರ ಚೀಟಿದಾರರಿಗೆ ಅನುಗುಣವಾಗಿ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲು ಉದ್ದೇಶಿಸಲಾಗಿದೆ 5 ಗ್ರಾಮಗಳಲ್ಲಿ ನ್ಯಾಯಬೆಲೆ ಅಂಗಡಿಗಳ ಅಧಿಸೂಚನೆಯನ್ನು ಹೊರಡಿಸಲಾಗಿದೆ

723 (981) ಶ್ರೀ ವೆಂಕಟಮುನಿಯಪ್ಪ ಬಿ ಪಿ (ಬೇತಮಂಗಲ) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಗಾರಪೇಟೆ ತಾಲ್ಲೂಕು ವ್ಯಾಪ್ತಿಯ 'ಜಲಾನಯನ ಅಭಿವೃದ್ಧಿ'ಗಾಗಿ 2005–06ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ಮಂಜೂರಾದ ಹಣವೆಷ್ಟು , (ವಿವರ ನೀಡುವುದು) ,

ಆ) ಈ ಹಣದಲ್ಲಿ ಶೇ 75ಕ್ಕೂ ಹೆಚ್ಚು ಹಣ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ತೋಟಗಾರಿಕೆ ಹಾಗೂ ಅರಣ್ಯಗಾರಿಕೆ ಕಾಮಗಾರಿಗಳು ಮಾಡದೇ ರೈತರನ್ನು ವಂಚಿಸಿರುವ ಪ್ರಕರಣಗಳನ್ನು ಸರ್ಕಾರ ಗಮನಿಸಿದೆಯೇ ,

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಬಂಗಾರುಪೇಟೆ ತಾಲ್ಲೂಕಿಗೆ ಜಲಾನಯನ ಅಭಿವೃದ್ಧಿ ಇಲಾಖೆ ಮೂಲಕ 2005–06ನೇ ಸಾಲಿನಲ್ಲಿ 291 096 ಲಕ್ಷ ರೂ ಗಳು ಮಂಜೂರಾಗಿದ್ದು, ಇದರ ಯೋಜನಾವಾರು ವಿವರಗಳನ್ನು ಕೆಳಗೆ ನೀಡಲಾಗಿದೆ

(ಲಕ್ಷ ರೂ ಗಳಲ್ಲಿ)

ಯೋಜನೆ	ಮಂಜೂರಾದ ಹಣ	ಖರ್ಚಾದ ಹಣ
ಡಿ ಪಿ ಎ ಪಿ	49 094	38 76
ರಾ ಜ ಅ ಯೋ	33 701	31 37
ಆರ್ ಐ ಡಿ ಎಫ್	18 301	18 301
ಸುಜಲ	190 00	161 867
ಒಟ್ಟು	291 096	250 298

ಆ) ಇಲ್ಲಾ

ಇ) ಇಲ್ಲಾ

ಈ) ಉದ್ಭವಿಸುವುದಿಲ್ಲ